ಶ್ರೀ ಆರ್. ಚೆನ್ನಿಗರಾಮಯ್ಯ.—ಮಿಷನರಿಗಳ ಹತ್ತಿರ ಇರುತ್ತದೆ.

ಶ್ರೀ ಜೆ. ಎಲ್. ಕಬಾಡಿ.—ಅವರು ಸರಿಯಾದ ಸಮಾಚಾರ ಕೊಟ್ಟಿಲ್ಲವೆಂಬುದು ಗೊತ್ತಿದೆಯೇ?

ಶ್ರೀ ಆರ್. ಚೆನ್ನಿಗರಾಮಯ್ಯ.—ಯಾವುಧಾದರೂ ಹಾಗೆಂದು ಗೊತ್ತಾದರೆ verify ಮಾಡಿ ಸರಿಮಾಡುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಜನಸಂಖ್ಯೆಯ ಅಂಕಿ ಅಂಶಗಳನ್ನು ಕೊಟ್ಟಿರುವುದು ಬೊಂಬಾಯಿ, ಹೈದರಾಬಾದು ಮತ್ತು ಕೊಡಗು ಕರ್ನಾಟಕದಲ್ಲಿ 1951ನೆಯ ಇಸವಿ ಸೆನ್ಸಸ್ ಪ್ರಕಾರ, ಹಳೆಯ ಮೈಸೂರಿನ ಅಂಕಿಅಂಶಗಳನ್ನು ಕೊಟ್ಟಿರುವುದು ಯಾವ ಆಧಾರದಮೇಲೆ?

ಶ್ರೀ ಆರ್. ಚೆನ್ನಿಗರಾಮಯ್ಯ.—ಸ್ಥಳೀಯ ಅಧಿಕಾರಿಗಳು ವಿಚಾರಮಾಡಿದ್ದಾರೆ; ಬಹುಶಃ ಅಲ್ಲಲ್ಲಿನ ಮಿಷನರಿಗಳನ್ನು ಕೇಳಿ ತಿಳಿದುಕೊಂಡು ಕೊಟ್ಟಿದ್ದಾರೆ.

ಶ್ರೀ ಜೆ. ಎಲ್. ಕಬಾಡಿ.—1951ನೆಯ ಇಸವಿ ಸೆನ್ಸಸ್ ಪ್ರಕಾರ ಬೊಂಬಾಯಿ, ಹೈದರಾಬಾದು ಕೊಡಗು ಪ್ರದೇಶದ ಅಂಕಿಅಂಶಗಳನ್ನು ಕೊಟ್ಟಿದ್ದಾರೆ; ಹಳೆಯ ಮೈಸೂರಿನ ಅಂಕಿಅಂಶಗಳನ್ನು ಯಾವ ಸೆನ್ಸಸ್ ಪ್ರಕಾರ ಕೊಟ್ಟಿದೆ?

ಶ್ರೀ ಆರ್. ಚೆನ್ನಿಗರಾಮಯ್ಯ.—1951ನೆಯ ಇಸವಿ ಸೆನ್ಸಸ್ ಪ್ರಕಾರ.

National Highways in the State.

Q.—2127. **Sri G. SIVAPPA** (Chitradurga)—[(On behalf of SRI G. ANNA RAO (Afzalpur)].—

Will the Government be pleased to state:—

(*a*) the number of National High Ways in the State;

(*b*) the number of original works undertaken and the amount spent on their repairs and maintenance during 1956-57;

(*c*) the number of original works approved by the Central Government during the Second Plan period?

A.—**Sri H. K. VEERANNA GOWDH** (Minister for Public Works).—

(*a*) Three.

(*b*) 33 works—Rs. 15,21,073.

(*c*) 62 works, of which thirty are carried over from the First Five-Year Plan.

Sri G. SIVAPPA.—May I know the number and which are the National Highways in the Road?

***Sri H. K. VEERANNA GOWDH.**—The National Highways are No. 4, No. 7 and No. 9.

Sri G. SIVAPPA.—Which are these Highways, Sir?

Sri H. K. VEERANNA GOWDH.—Highway No. 4—ಬೊಂಬಾಯಿ-ಪೂನ-ಬೆಂಗಳೂರು-ಮದರಾಸು-ಬೆಳಗಾಂ, ಧಾರವಾಡ ರಸ್ತೆ; ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಹೆಚ್ಚು ಭಾಗ ಹೋಗುವ ಮದರಾಸು ರಸ್ತೆ ಸೇರಿದೆ. National Highway No. 7-ಇದು ಬೆನಾರೆಸ್‌ನಿಂದ ಕನ್ಯಾಕುಮಾರಿಯವರೆಗಿದೆ. ಬೆಂಗಳೂರಿನಿಂದ ದೇವನಹಳ್ಳಿ ಬಾಗೇಪಲ್ಲಿವರೆಗೆ ಹೋಗುವುದು ನಮ್ಮ ರಾಜ್ಯಕ್ಕೆ ಸೇರಿದೆ. 9ನೆಯದು ಬೆಜವಾಡ-ಹೈದರಾಬಾದು ರಸ್ತೆ. ಸ್ವಲ್ಪ ಭಾಗ ಬದರೆಗೆ ಹೋಗುತ್ತದೆ. ಇದು ಆಂಧ್ರ ಪ್ರದೇಶಕ್ಕೆ ಸಂಬಂಧ ಕಲ್ಪಿಸುತ್ತದೆ.

ಶ್ರೀ ಜಿ. ಶಿವಪ್ಪ.—ಇದನ್ನು ಜಾಸ್ತಿಮಾಡುತ್ತಾರೆಯೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾವು ಬರೆಯಬಹುದು. ಮದರಾಸು-ಕನ್ಯಾನೂರು ರಸ್ತೆಯನ್ನು ನ್ಯಾಷನಲ್ ಹೈವೇಆಗಿ ಸೇರಿಸಬೇಕೆಂದು ಬರೆಯಬಹುದು, ಆದರೆ ಅವರು ಒಪ್ಪಿಕೊಳ್ಳಬೇಕು.

Sri G. SIVAPPA.—May I know the grant given by the Central Government and our State Government for these National Highways? What is the maintenance grant per mile?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದರ ಸಂಬಂಧವಾಗಿ ಒಂದು ಕಾನೂನುಮಾಡಿದ್ದಾರೆ; ಅದರ ಪ್ರಕಾರ ಈ ರಸ್ತೆಗಳು ಅವರಿಗೆ ಸೇರಿದುವು, ಅವರ ಆಸ್ತಿ. The entire responsibility of financing as well as repairing is that of the Government of India.

Sri G. SIVAPPA.—Who are the supervisors?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾವು ಅವರ ಏಜೆಂಟುಗಳಾಗಿ ಕೆಲಸಮಾಡುತ್ತೇವೆ.

Sri G. SIVAPPA.—We are the supervisors above you, Sir?

ಶ್ರೀ ಎಚ್. ಕೆ. ವೀರಣ್ಣಗೌಡ.—ಸೂಪರ್‌ವೈಸರ್ಸ್ ಎಂದೇನೂ ಇಲ್ಲ. ಸೂಪರಿಂಟೆಂಡಿಂಗ್ ಇಂಜಿನಿಯರ ಗ್ರೇಡಿನ ಒಬ್ಬರು ಅಧಿಕಾರಿ ಇದ್ದಾರೆ. Southern zoneಗೆಲ್ಲ ಅವರು ಅಧಿಕಾರಿ; ಅವರು ಸೂಪರ್‌ವೈಸ್ ಮಾಡುವುದಿಲ್ಲ 'ಲೈಸ್ಸಾ' ಆಗಿ ಕೆಲಸಮಾಡುತ್ತಾರೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಬೆಂಗಳೂರು ಹೊನ್ನಾವರ ರಸ್ತೆಕೂಡ ನ್ಯಾಷನಲ್ ಹೈವೇ ಆಗುವುದು ಸೂಕ್ತವಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಅಭಿಪ್ರಾಯ; ಸೂಕ್ತವಲ್ಲವೆಂದು ಹೇಳುವುದಿಲ್ಲ. ಬದರೆ-ಕರ್ನೂಲು ಮಾರ್ಗವಾಗಿ ಬೆಜವಾಡದಿಂದ ಬರುವ ರಸ್ತೆಕೂಡ ನ್ಯಾಷನಲ್ ಹೈವೇ ಆಗುವುದು ಸೂಕ್ತ; ಆದರೆ ಅವರು ಒಪ್ಪಬೇಕು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ನ್ಯಾಷನಲ್ ಹೈವೇಸ್‌ನಲ್ಲಿ ನಮ್ಮ ರಾಜ್ಯದಲ್ಲಿರುವುದಕ್ಕಿಂತ ಬೇರೆ ಕಡೆ ಇರುವುದು ಉತ್ತಮವಾಗಿಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾನು ಬೇರೆ ಕಡೆ ನೋಡಿಲ್ಲ; ಅದು ಉತ್ತಮ ಎಂಬುದನ್ನು ಹೇಗೆ ಒಪ್ಪುವುದಕ್ಕಾಗುತ್ತದೆ?

ಶ್ರೀ ಎಸ್. ಸುಬ್ಬಯ್ಯನಾಯಕ್.—ನ್ಯಾಷನಲ್ ಹೈವೇ ಮಂಗಳೂರು-ಕಾರವಾರಕ್ಕೆ ಹಾದುಹೋಗುವುದಿಲ್ಲವೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲ. ಈ 4,7 ಮತ್ತು 9ನೆಯ ರಸ್ತೆಗಳು ಯಾವ ಯಾವ ಭಾಗಗಳಲ್ಲಿ ಹೋಗುತ್ತವೆಯೋ ಅದು ಬಿಟ್ಟು ಬಾಕಿ ಕಡೆಗಳಲ್ಲಿಲ್ಲ.

Sri J. H. SHAMSUDDIN.—Will the Road from Bangalore to the sea coast be made a Highway?

ಶ್ರೀ ಎಚ್. ಕೆ. ವೀರಣ್ಣಗೌಡ.—ನಾವು ಬೇಕಾದರೆ ಕೇಳಬಹುದು, ಒಪ್ಪಿಕೊಳ್ಳುವುದು ಅಥವ ಬಿಡುವುದು ಇಂಡಿಯಾ ಸರ್ಕಾರಕ್ಕೆ ಸೇರಿದ್ದು.

ಶ್ರೀ ಜಿ. ಎಸ್. ಪುಟ್ಟಣ್ಣ.—ಲೇಲ್ಯಾಂಡ್ ರಾರಿಗಳಲ್ಲಿ ಹತ್ತು ಟನ್‌ವರೆಗೆ ಲೋಡ್‌ಮಾಡಿ ನ್ಯಾಷನಲ್ ಹೈವೇಗಳಲ್ಲಿ ಓಡಿಸುತ್ತಿರುವುದರಿಂದ ಆ ರಸ್ತೆಗಳಿಗೆ ಅಪಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅಧ್ಯಕ್ಷರು.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಂಗಳೂರು-ಬೆಂಗಳೂರು ರಸ್ತೆಯನ್ನು ನ್ಯಾಷನಲ್ ಹೈವೇಆಗಿ ಕರ್ವರ್ಟ್ ಮಾಡಿದರೆ ಸರ್ಕಾರಕ್ಕಾಗುವ ತೊಂದರೆಯೇನು?

ಶ್ರೀ ಎಚ್. ಕೆ. ವೀರಣ್ಣಗೌಡ.—ಇದು ಇಂಡಿಯಾ ಸರ್ಕಾರದ ಜವಾಬ್ದಾರಿಗೆ ಸೇರಿದ್ದು. ಅವರ ಸ್ಕೀಂ ಪ್ರಕಾರ ಯಾವುದನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತಾರೆ. ನಮ್ಮ ಪ್ರಪೋಸಲ್ ಅವರು ಯೋಚಿಸಿ ಅಂಗೀಕಾರ ಮಾಡಿದರೆ ಮಾಡಬಹುದು.

ಶ್ರೀ ಎ. ಮುನಿಯಪ್ಪ.—ಬೆಂಗಳೂರು-ಬಾಗೇಪಲ್ಲಿ ರಸ್ತೆಗೆ 1956-57ರಲ್ಲಿ ಎಷ್ಟು ಹಣ ಮಂಜೂರು ಮಾಡಿತ್ತು?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ತಪಶೀಲು ನನ್ನಲ್ಲಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಮೈಸೂರು ಸರ್ಕಾರ ಎಷ್ಟು ರಸ್ತೆಗಳನ್ನು ನ್ಯಾಷನಲ್ ಹೈವೇಗೆ ಸೇರಿಸಿಕೊಳ್ಳಬೇಕೆಂದು ಇಂಡಿಯಾ ಸರ್ಕಾರಕ್ಕೆ ಶಿಪಾರ್ಸು ಮಾಡಿದೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾವುದೂ ಮಾಡಿಲ್ಲ.

ಶ್ರೀ ಯು. ಎಂ. ಮಾದಪ್ಪ.—ಶಿಪಾರ್ಸುಮಾಡಬೇಕೆಂದು ರಸ್ತೆಗಳ ಪಟ್ಟಿ ಏನಾದರೂ ಮಾಡಿದೆಯೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಮಾಡಿಲ್ಲ, ಮಾಡಬೇಕೆಂಬುದು ನನ್ನ ಯೋಚನೆಯಲ್ಲಿದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ನಮ್ಮ ಪಬ್ಲಿಕ್ ವರ್ಕ್ಸ್ ಇಲಾಖೆ ನಮ್ಮ ರಸ್ತೆಗಳನ್ನೂ ಸರಿಯಾದ ಸ್ಥಿತಿಯಲ್ಲಿಡಬೇಕು, ಅದರ ಜೊತೆಗೆ ಸೆಂಟ್ರಲ್ ಪಿ. ಡಬ್ಲ್ಯು. ಡಿ.ಗೆ ಸೇರಿದ ರಸ್ತೆಗಳನ್ನೂ ಮೈಂಟೈನ್ ಮಾಡಬೇಕು. ಆದ್ದರಿಂದ ನಮಗೆ ಮೈಂಟೆನೆನ್ಸ್ ಥಾರ್ಜಸ್ ಕೊಡುತ್ತಾರೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಆ ತಪಶೀಲಲ್ಲ. ಬಹುಶಃ ಕಮಿಷ್ಟ್ ಕೊಡುತ್ತಾರೋ ಏನೋ ವಿಚಾರಿಸಿ ಹೇಳಬೇಕು.

Sri J. B. MALLARADHYA.—Has the Government of Mysore any voice in the selection of National Highways running within the State's territory?

Sri H. K. VEERANNA GOWDH.—We have to make suggestions for improvement.

Sri J. B. MALLARADHYA.—What I am asking is: in deciding which should be the National Highway, have the Government any voice or have they prepared a list of National Highways and sent it to the Government of India?

Sri H. K. VEERANNA GOWDH.—I have just answered the question. We have not so far made any specific request to the Government of India, but I am personally thinking of including some of these roads among the National Highways by requesting the Central Government to treat them as such. I do not know whether our request will be conceded or not.

ಶ್ರೀ ಟಿ. ಕೆ. ಕಂಬ್ಳಿ.—ಪಿ. ಡಬ್ಲ್ಯು. ಡಿ. ರಸ್ತೆಗಿಂತ ನ್ಯಾಷನಲ್ ಹೈವೇಗೆ ಮೈಲಿಯೊಂದಕ್ಕೆ ಎಷ್ಟು ಹೆಚ್ಚು ಗ್ರಾಂಟು ಕೊಡುತ್ತಾರೆ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಖಚಿತವಾಗಿ ಗೊತ್ತಿಲ್ಲ.

Sri C. K. RAJAIAH SETTY.—Does the West Coast Road come under the National Highway?

Sri H. K. VEERANNA GOWDH.—It is now being constructed at the cost of the Government of India. It would be known as the Bombay-Cape Comorin Road. Therefore it becomes a National Highway.

Sri G. SIVAPPA.—May I know if the entire cost incurred by the State Government in maintaining these roads is being met by the Central Government or any portion is given by the State Government?

Sri H. K. VEERANNA GOWDH.—The entire cost of the original work as well as repairs and maintenance is met by the Government of India.

ಶ್ರೀ ಯು. ಎರ್. ಮಾದಪ್ಪ.—ನ್ಯಾಷನಲ್ ಹೈವೇ ಆಗಿ ತೆಗೆದುಕೊಳ್ಳುವಾಗ ಕೇಂದ್ರ ಸರ್ಕಾರ ಯಾವ ತತ್ವವನ್ನನುಸರಿಸಿ ತೆಗೆದುಕೊಳ್ಳುವುದು?

ಶ್ರೀ ಎಚ್. ಕೆ. ವೀರಣ್ಣಗೌಡ.—ನನ್ನನ್ನು ಕೇಳಿದರೆ ಹೇಗೆ ಹೇಳುವುದು?

ಶ್ರೀ ಯು. ಎಂ. ಮಾದಪ್ಪ.—ಈಗ ತೆಗೆದುಕೊಂಡಿರುವ ರಸ್ತೆಗಳನ್ನು ಯಾವ ಆಧಾರದಮೇಲೆ ತೆಗೆದುಕೊಂಡರು?

ಶ್ರೀ ಎಚ್. ಕೆ. ವೀರಣ್ಣಗೌಡ.—ಅವರೇನು ಆಧಾರವನ್ನಿಟ್ಟುಕೊಂಡಿದ್ದಾರೋ ಆ ಆಧಾರದ ಮೇಲೆ.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಬೆಂಗಳೂರು ಬಿ.ಸಿ.ಸಿ. ಹೈವೇ ಮುಂತಾದ ಕೆಲವು ನ್ಯಾಷನಲ್ ಹೈವೇಗಳಲ್ಲಿ ಕೆಲವು ಭಾಗದಲ್ಲಿ ಟಾರು ಕೂಡ ಹಾಕಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಅದು ಬಹಳ ವಿವರ ವಾಯಿತು. ಅದೆಲ್ಲಾ ಬೇಕಾದರೆ ಇಂಡಿಯಾ ಸರ್ಕಾರ ವನ್ನು ಕೇಳಬೇಕು.

Sri J. P. SARWESH.—How many roads were repaired in Gulbarga district?

Sri H. K. VEERANNA GOWDH.—The question does not relate to it. ಗುಲ್ಬರ್ಗ ಡಿಸ್ಟ್ರಿಕ್ಟಿಗೆ ಬಹುಶಃ ಯಾವ ನ್ಯಾಷನಲ್ ಹೈವೇಯೂ ಹೋಗುವುದಿಲ್ಲ.

ಶ್ರೀ ಇ. ನಾರಾಯಣಗೌಡ.—ನ್ಯಾಷನಲ್ ಹೈವೇ ಬಗ್ಗೆ ಕೇಂದ್ರ ಸರ್ಕಾರದಿಂದ ಹಣ ಬರುವುದು ನಿಧಾನ ವಾಗಿ ಸೇತುವೆ ಕೆಲಸ ಕೈಕೊಂಡಿಲ್ಲವಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಹುಶಃ ಎರೆ ಮಲ್ಲಪ್ಪನ ಕೆರೆ ವಿಚಾರ ತಾವು ಹೇಳುವುದೆಂದು ಕಾಣು ತ್ತದೆ. ಅದು ಹರಿಯುವ ನೀರಲ್ಲ, ಕೆರೆಯಲ್ಲಿ ಯಾವಾ ಗಲೂ ನೀರಿರುತ್ತದೆ. ಫೌಂಡೇಷನ್ ತೆಗೆಯುವುದು ಕಷ್ಟ. ಇಂಡಿಯಾ ಸರ್ಕಾರದ ಇಂಜನಿಯರೂ ಸಹ ಬಂದು ನೋಡಿ ಅಲ್ಲಿನ ಸೂಪರಿಂಟೆಂಡಿಂಗ್ ಇಂಜನಿ ಯರಿಗೆ ಕೆಲವು ಸಲಹೆ ನೀಡಿದ್ದಾರೆ. ಟ್ಯೂಬ್ ಪೈಪ್ ಹಾಕಬೇಕೆಂದೂ ಸ್ವಲ್ಪ ರಿವೈಜ್‌ಮಾಡಿ ಆ ಕೆಲಸ ತೆಗೆದುಕೊಳ್ಳಬೇಕೆಂದೂ ಪ್ರಯತ್ನ ಮಾಡುತ್ತಿದ್ದಾರೆ.

Sri J. B. MALLARADHYA.—When did the Government of Mysore participate in the National Highway Scheme?

Sri H. K. VEERANNA GOWDH.—Some time back.

Sri J. B. MALLARADHYA.—Were they not appraised of the conditions under which the Government could participate in the National Highway Scheme and if so what are the conditions?

Sri H. K. VEERANNA GOWDH.—This is going into too much of details; if my friend is interested I will get the file and give the information.

Sri J. VENKATAPPA.—Is there a separate staff to take care of these National Highways?

ಶ್ರೀ ಎಚ್. ಕೆ. ವೀರಣ್ಣಗೌಡ.—ಕೆಲವು ದೊಡ್ಡ ಕೆಲಸಮಾಡುವಾಗ ಸ್ಪೆಷಲ್ಲಾಗಿ ಬೇಕಾದಷ್ಟು ದಿವಸ ನಬ್‌ಡಿವಿಜ್, ಡಿವಿಜ್ ಏರ್ಪಾಟು ಮಾಡುತ್ತೇವೆ.

Sri J. VENKATAPPA.—Who meets the establishment charges?

Sri H. K. VEERANNA GOWDH.—The Central Goverment.

Sri C. J. MUCKANNAPPA.—May I know who represented the Mysore Government in the Roads Congress held recently?

Sri H. K. VEERANNA GOWDH.—We select the representatives on the basis of the recommendation of the Chief Engineer.

Mr. SPEAKER.—What has that to do with this question?

ಶ್ರೀ ಎಸ್. ಮುನಿರಾಜು.—ಮುನಿಸಿಪಲ್ ಸರಹದ್ದಿ ನಲ್ಲಿ ಹಾದು ಹೋಗುವ ನ್ಯಾಷನಲ್ ಹೈವೇ ಕೆಲಸ ಮಾಡುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬಂದಿಲ್ಲ.

Number of Holidays and Working Days for Middle and High Schools.

Q.—2156. Sri K. P. REVANNA-SIDDAPPA (Tiptur).—

Will the Government be pleased to state:—

(*a*) the number of working days for Middle and High Schools during the period 1st January to 31st August 1957 in the State;

(*b*) the number of Holidays declared for such Schools during the above period?

A.—Sri V. VENKATAPPA (Minister for Education).—

	Middle Schools	*High Schools*
(*a*)	62 days	52 days
(*b*)	181 days	191 days

ಶ್ರೀ ಜೆ. ಬಿ. ಮಲ್ಲಾರಾಧ್ಯ.—ಕೆಲಸಮಾಡುವ ದಿವಸಗಳಿಗಿಂತ ರಜಾದಿವಸಗಳು ಜಾಸ್ತಿಯಾಗಿರುವುದೇಕೆ!

ಶ್ರೀ ವಿ. ವೆಂಕಟಪ್ಪ.—ಈ ತಪ್ಪು ಅಭಿಪ್ರಾಯ ವನ್ನು ಹೋಗಲಾಡಿಸಬೇಕೆಂದು ಜನವರಿಯಿಂದ ಪ್ರಾರಂಭವಾಗುತ್ತಿದ್ದ ಹೊಸವರ್ಷವನ್ನು ಮೇ ತಿಂಗ ಳಿಂದ ಪ್ರಾರಂಭಿಸಬೇಕೆಂದು ಮಾಡಿದೆ. ಮೊದಲು ಸರ್ವೋದಯ ದಿವಸ ಜನವರಿಯಲ್ಲಿ ಶಾಲೆಗಳು ಪ್ರಾರಂಭವಾಗುತ್ತಿದ್ದವು. ಅದನ್ನು ತಪ್ಪಿಸಿ ಬೇರೆ ಏರ್ಪಾಡು ಮಾಡಿದೆ. ಆ ವರ್ಷ ಫೆಬ್ರುವರಿಯಿಂದ ಮೇ ವರೆಗೆ ಪೂರ್ಣವಾಗಿ ರಜಾ ಇತ್ತು. ಆದ್ದರಿಂದ ಕ್ಲಾಸು ನಡೆದಿಲ್ಲವೆಂಬ ಭಾವನೆಯಿದೆ. ಅದು ಸರಿ ಯಲ್ಲ. ಸ್ಕೂಲುಗಳು ಎಷ್ಟು ದಿವಸ ಕೆಲಸ ಮಾಡಿವೆ ಯೆಂಬುದನ್ನು ಹೇಳುತ್ತೇನೆ. ಸರ್ವೋದಯ ಇಯರ್ ಇದ್ದಾಗ ಸಾಧಾರಣವಾಗಿ ಪ್ರೈಮರಿಸ್ಕೂಲು 229 ದಿವಸ, ಮಿಡ್ಲ್‌ಸ್ಕೂಲು 221 ದಿವಸ, ಹೈಸ್ಕೂಲು 215 ದಿವಸಗಳು ನಡೆದಿವೆ. ಈವರ್ಷ ಸ್ವಲ್ಪಬದಲಾಯಿ ಸಿದಮೇಲೆ ಮೇಯಿಂದ ಮಾರ್ಚಿಯವರೆಗೆ 245 ದಿವಸ ಪ್ರೈಮರಿಸ್ಕೂಲು, 241 ದಿವಸ ಮಿಡ್ಲ್‌ಸ್ಕೂಲು, 229 ದಿವಸ ಹೈಸ್ಕೂಲು ನಡೆದಿವೆ. ವರ್ಕಿಂಗ್ ಡೇಸ್ ಕಡಮೆಯಾಗಿದೆಯೆಂಬ ತಪ್ಪು ಭಾವನೆ ಬಂದಿರುವುದು ಸರಿಯಲ್ಲ. ಕೆಲವು ದಿವಸ ಕಡಮೆಯಾದದ್ದನ್ನು ಕಾಂಪೆನ್ಸೇಟ್ ಮಾಡಬೇಕೆಂದು ಶನಿವಾರ ಅರ್ಧ ದಿವಸ ಶಾಲೆ ಇದ್ದುದ್ದನ್ನು ಪೂರ್ತಾದಿವಸ ಕೆಲಸ